O.S. NO. 16/2018
PW - 2 .
Dated 16-06-2026.

ಸಾಕ್ಷಿಯನ್ನು ಈ ದಿನ ದಿನಾಂಕ 16 -06-2026 ರಂದು ಮದ್ಯಾಹ್ನದ ಸೆಷನಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

4 ನೇ ಪ್ರತಿವಾದಿ ಪ್ರಾಥಮಿಕ ಶಾಲಾ ಶಿಕ್ಷಕ ಅಂತಾ ಕರ್ತವ್ಯ ನಿರ್ವಹಿಸುತ್ತಿದು 1 ಲಕ್ಷ 20 ಸಾವಿರ ಪ್ರತಿ ತಿಂಗಳು ಸಂಬಳ ಪಡೆಯುತ್ತಿದ್ದಾರೆ ಎಂದರೆ ಸಾಕ್ಷಿ ಪ್ರಾಥಮಿಕ ಶಾಲಾ ಶಿಕ್ಷಕರು ಇರುವುದು ನಿಜ ಆದರೆ ಇಷ್ಟೊಂದು ಸಂಬಳ ಇರುವುದಿಲ್ಲ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿ ಈಗ ನಿವೃತ್ತಿ ಆಗಲು 6 ವರ್ಷ ಉಳಿದಿರುತ್ತವೆ ಎಂದರೆ ಇರಬಹುದು. 4 ನೇ ಪ್ರತಿವಾದಿ ಸರ್ಕಾರಿ ಶಾಲಾ ಶಿಕ್ಷಕ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ಮತ್ತು ಸಂಬಳ ಪಡೆಯುತ್ತಿದ್ದ ಬಗ್ಗೆ ಎಲ್ಲ ದಾಖಲೆಗಳು ಇರುತ್ತವೆ ಎಂದರೆ ಖೊಟ್ಟಿ ಇರುತ್ತವೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿಯ ಹೆಂಡತಿ ಸಹ ಎಲ್ ಐ ಸಿ ಎಜೆಂಟ ಆಗಿ ಕೆಲಸ ಮಾಡುತ್ತಿದ್ದು, ಅವರು ಪ್ರತಿ ತಿಂಗಳು 30-40 ಸಾವಿರ ಕಮಿಷನ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ಜಾಗಾ ಖರೀದಿ ಮಾಡಿ ಅದರಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸುಳ್ಳು. 4 ನೇ ಪ್ರತಿವಾದಿ ತನ್ನ ನೌಕರಿ ಮೇಲೆ ಬ್ಯಾಂಕನಿಂದ ಸಾಲ ಪಡೆದ ಬಗ್ಗೆ ಮತ್ತು ಸಾಲದ ಕಂತು ಪಾವತಿಸಿದ ಬಗ್ಗೆ ಎಲ್ಲ ದಾಖಲಾತಿ ಮತ್ತು ಎಲ್ಲ ಪೇ ಸ್ಲಿಪಗಳು ಇರುತ್ತವೆ ಎಂದರೆ ಎಲ್ಲ ಸುಳ್ಳು ಇರುತ್ತವೆ ಎಂದು ನುಡಿದಿರುತ್ತಾರೆ.

4 ನೇ ಪ್ರತಿವಾದಿ ಸದರಿ ಜಾಗಾದಲ್ಲಿ ಮನೆ ಕಟ್ಟಿಕೊಂಡು 2006 ರಿಂದ ಇಲ್ಲಿಯವರೆಗೆ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾವು ಒಟ್ಟು ಕುಟುಂಬದ ಆಸ್ತಿಯಿಂದ ಬಂದ ಹಣ ಮತ್ತು ಮನೆ ಕಟ್ಟಲು ಜಾಗಾ ಸಹ ಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಮತ್ತು ನನ್ನ ತಂದೆಯ ಎಲ್ಲ ಸಹೊದರರು ಸೇರಿ ಹಣ ಕೊಟ್ಟಿರುತ್ತಾರೆ. 4 ನೇ ಪ್ರತಿವಾದಿಗೆ ಜೊಯಿಂಟ ಅಕೌಂಟ ಮೂಲಕ ಕೊಟ್ಟಿರುತ್ತಾರೆ ಮತ್ತು ಸ್ವಂತ ಅಕೌಂಟಗಳಿಂದ ವಿಡ್ರಾವಲ ಮಾಡಿಸಿಕೊಟ್ಟಿರುತ್ತಾರೆ. ಆ ಕುರಿತು ಬ್ಯಾಂಕ ಖಾತಾ ಪುಸ್ತಕಗಳು ಮತ್ತು ಸ್ಟೇಟಮೆಂಟ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿರುತ್ತೇನೆ . ನಾನಾಗಲಿ ಮತ್ತು ನನ್ನ ತಂದೆ ಆಗಲಿ 4 ನೇ ಪ್ರತಿವಾದಿಗೆ ಯಾವುದೇ ರೀತಿ ಆರ್ಥಿಕ ಸಹಾಯ ಮಾಡದೇ ಇದ್ದರು ಸಹ ಸಹಾಯ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಗುತ್ತಿಗೆದಾರ ಅಂತಾ ಕೆಲಸ ಮಾಡುತ್ತಿದ್ದ ಬಗ್ಗೆ ಮತ್ತು ಹಣ ಸಂಪಾದಿಸುತ್ತಿದ್ದನು ಎಂಬ ಬಗ್ಗೆ ಬ್ಯಾಂಕ ಖಾತಾ ಪುಸ್ತಕ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ಸಾಕ್ಷಿಗೆ ವಕೀಲರು ಕಡತದಲ್ಲಿರುವ ನಿಪಿ – 1 ರಿಂದ 58 ದಾಖಲೆಗಳನ್ನು ತೊರಿಸಿ ಗುತ್ತಿದಾರರ ಲೈಸನ್ಸ ಮತ್ತು ತಮ್ಮ ತಂದೆಯ ಅಕೌಂಟ ಖಾತಾ ಪುಸ್ತಕ ಇದೆಯಾ ಎಂದು ಸೂಚಿಸಲಾಗಿ ಸದರಿ ದಾಖಲೆಗಳು ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಯ ಯಾವುದೇ ಗುತ್ತಿಗೆ ಲೈಸನ್ಸ ಮತ್ತು ಹಣ ಸಂಪಾದಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಉದ್ಯೋಗ ಖಾತರಿ ಅಡಿಯಲ್ಲಿ ಕೂಲಿ ಕೆಲಸಕ್ಕೆ ಹೊಗುತ್ತಾರೆ ಎಂದರೆ ಸಾಕ್ಷಿ ಹಿರಿಯ ನಾಗರಿಕರ ಅಂತಾ ಮನೆಯಲ್ಲಿ ಟೈಮ ಪಾಸ

ಆಗದೇ ಇರುವುದರಿಂದ ಹೊಗುತ್ತಾರೆ ಎಂದು ನುಡಿದಿರುತ್ತಾರೆ. ಹಿರಿಯ ನಾಗರಿಕರಿಗೆ ಕೂಲಿ ಕೆಲಸಕ್ಕೆ ಬಂದವರ ಮಕ್ಕಳು ಆಟ ಆಡಿಸಲು ಮತ್ತು ಅವರಿಗೆ ನೀರು ಕೊಡುವುದು ಸಹಾಯ ಮಾಡುವುದಕ್ಕೆ ಉದ್ಯೋಗ ಖಾತರಿ ಯೊಜನೆಯಲ್ಲಿ ಬಳಸಿಕೊಳ್ಳುತ್ತಾರೆ. ನಾನು ಹಾಜರು ಪಡಿಸಿದ ಪವರ ಆಪ ಅಟಾರ್ನಿಯಲ್ಲಿ ನನ್ನ ತಂದೆಗೆ ವಯಸ್ಸು ಆಗಿದ್ದರಿಂದ ಆರೋಗ್ಯ ಸರಿ ಇಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಅನುಕ್ರಮ ನಂ. 8 ಟ್ರ್ಯಾಕ್ಟರ ನಂ. ಕೆ 24 ಟಿ 2763 ನೇದ್ದನ್ನು ಸ್ಟೇಟಬ್ಯಾಂಕ ಜಾಯಿಂಟ ಖಾತೆ ಯಲ್ಲಿ ಲೊನ ಮಾಡಿ ಎಲ್ಲರೂ ಸೇರಿ ಖರೀದಿ ಮಾಡಿರುತ್ತೇವೆ. ಸದರಿ ಟ್ರ್ಯಾಕ್ಟರನ್ನು 3 ನೇ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗಾಗಲಿ ನನ್ನ ತಂದೆಗೆ ಆಗಲಿ ಮತ್ತು ಉಳಿದ ಪ್ರತಿವಾದಿಗಳಿಗೆ ಆಗಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 188/1 ಕ್ಷೇತ್ರ 1 ಎಕರೆ 24 ಗುಂಟೆ 3 ನೇ ಪ್ರತಿವಾದಿ ಅಡಿವೆಪ್ಪ ಮಲ್ಲ ಕತ್ತಿ ರೂ. 1 ಲಕ್ಷ 8 ಸಾವಿರಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ. 188/1 ಕ್ಷೇತ್ರ 1 ಎಕರೆ 24 ಗುಂಟೆ ಊರಿಗೆ ಹೊಂದಿಕೊಂಡು ಇದೆ ಎಂದರೆ ಸರಿ. ಹೀಗಾಗಿ ಸದರಿ ಆಸ್ತಿಯಲ್ಲಿ ಪ್ಲಾಟ ರಚನೆ ಮಾಡಲು ಮತ್ತು ಮನೆ ಕಟ್ಟಲು ಅನುಕೂಲ ಇದೆ ಎಂದರೆ ಸರಿ. ಹೀಗಾಗಿ 11 ರಿಂದ 17 ನೇ ಪ್ರತಿವಾದಿ ಗಳು ಸೇರಿ 3 ನೇ ಪ್ರತಿವಾದಿ ಹೆಸರಿಗೆ ಸದರಿ ಆಸ್ತಿ ಹಣ ಕೊಟ್ಟು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ 11 ರಿಂದ 17 ನೇ ಪ್ರತಿವಾದಿ ಗಳು ಮತ್ತು ಉಳಿದ ಊರಿನ ಜನರು ವಾಸದ ಮನೆಗಳನ್ನು ಕಟ್ಟಿಸಿಕೊಂಡು ವಿದ್ಯುತ ಮತ್ತು

ನೀರಿನ ಸಂಪರ್ಕ ಪಡೆದು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ವಾಸದ ಮನೆಗಳು ಇವೆ ಇಲ್ಲವೊ ಎಂದು ಕಂಡುಕೊಳ್ಳಲು ನ್ಯಾಯಾಲಯದಿಂದ ಆಯುಕ್ತರು ನೇಮಿಸಿರುತ್ತಾರೆ ಮತ್ತು ಸದರಿ ಆಯುಕ್ತರು ತಮ್ಮ ವರದಿ ಪ್ರಸ್ತುತ ಪ್ರಕರಣದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆಯುಕ್ತರು ವಾಸದ ಮನೆಗಳು ಕಟ್ಟಿರುತ್ತಾರೆ ಎಂದು ಆಯುಕ್ತರು ಉಲ್ಲೆಖಿಸಿರುತ್ತಾರೆ ಎಂದರೆ ಸಾಕ್ಷಿ ಅಂತವರದೇ ಮನೆ ಅಂತಾ ಉಲ್ಲೇಖಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆಯುಕ್ತರ ವರದಿ ಸರಿ ಇದ್ದುದರಿಂದ ಅದನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅವರ ಸಹೊದರರ ಮದ್ಯೆ ಮೌಖಿಕ ವಾಟ್ನಿ ಆಗಿದ್ದು ಸದರಿ ವಾಟ್ನಿ ಪ್ರಕಾರ ಅವರವರ ಹಿಸ್ಸಾ ಆಸ್ತಿ ಪ್ರತ್ಯೆಕ ಕಬ್ಜಾ ವಹಿವಾಟ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಮೌಖಿಕ ವಾಟ್ನಿ ಸಮಯದಲ್ಲಿ ಮಲ್ಲನಗೌಡ ಬಸನಗೌಡ ಪಾಟೀಲ , ಬಸವಣ್ಣೆಪ್ಪ ಕತ್ತಿ, ದುಂಡಯ್ಯ ಪೂಜಾರ, ನಿಂಗಪ್ಪ ಪಟ್ಟನಶೇಟ್ಟಿ , ಶಿವಾನಂದ ಗುರುಪುತ್ರನ್ನವರ ಹಾಜರಿದ್ದರು ಎಂದರೆ ಸರಿಯಲ್ಲ. ಹೀಗೆ ಮೌಖಿಕ ವಾಟ್ನಿ ಆದ ನಂತರ ತಮ್ಮ ತಮ್ಮ ಹಿಸ್ಸಾ ಕಬ್ಜಾ ವಹಿವಾಟ ಮಾಡುತ್ತಾ ಮತ್ತೆ ಬೇರೆ ಬೇರೆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೌಖಿಕ ಅಪಸಾತ ವಾಟ್ನಿಯಲ್ಲಿ ಸರ್ವೆ ನಂ. 98/1, 55/4 ಮತ್ತು ಜಿಪಿ ನಂ. 88 ನನ್ನ ತಂದೆ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಿಸ್ಸೆಗೆ ಸರ್ವೆ ನಂ 98/1 ರಲ್ಲಿ ಕ್ಷೇತ್ರ 2 ಎಕರೆ 12 ಗುಂಟೆ, ಸರ್ವೆ ನಂ. 155/3 ರಲ್ಲಿ ಕ್ಷೇತ್ರ 3 ಎಕರೆ 23 ಗುಂಟೆ ಮತ್ತು ಜಿ ಪಿ ನಂ . 77 ಬಂದಿರುತ್ತವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ

O.S. NO. 16/2018
PW - 2 .
Dated 16-06-2026.

ಸರ್ವೆ ನಂ. 88/1 ರಲ್ಲಿ ಕ್ಷೇತ್ರ 2 ಎಕರೆ 12 ಗುಂಟೆ , ಸರ್ವೆ ನಂ. 55/4 ರಲ್ಲಿ ಕ್ಷೇತ್ರ 1 ಎಕರೆ 4 ಗುಂಟೆ ಬಂದಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ. 88/2ಬಿ ನಲ್ಲಿ ಒಂದು ತೋಟದ ಮನೆ ಇದ್ದು ಅದು ಸಹ 3 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಹಿಸ್ಸಗೆ ಸರ್ವೆ ನಂ. 98/2 ಬಿ ಮತ್ತು 98/ 1 ರಲ್ಲಿ ಕ್ಷೇತ್ರ 2 ಎಕರೆ 12 ಗುಂಟೆ, ಸರ್ವೆ ನಂ. 155/3 ರಲ್ಲಿ ಕ್ಷೇತ್ರ 1 ಎಕರೆ 3 ಗುಂಟೆ ಜಮಿನು ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಸಾಗವಾಣಿ ಮರಗಳು ಮತ್ತ ಬೇವಿನ ಮರಗಳು ಇರುತ್ತವೆ ಎಂದು ತೊರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ಸದರಿ ನಾನು ಹೇಳುತ್ತಿರುವ ಸಾಗವಾಣಿ ಮರಗಳು ಮತ್ತು ಬೇವಿನ ಮರಗಳು ವಾಟ್ನಿ ಪ್ರಕಾರ ಅವರವರ ಹಿಸ್ಸೆ ಆಸ್ತಿಗಳಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಪಿತಾರ್ಜಿತ ಆಸ್ತಿಗಳನ್ನು ಹೊರತು ಪಡಿಸಿ ಸ್ವಯಾರ್ಜಿತ ಆಸ್ತಿಗಳನ್ನು ಖರೀದಿ ಮಾಡಲು ನನ್ನ ತಂದೆ ಆಗಲಿ, ನಾನಾಗಲಿ ಯಾವುದೇ ಆರ್ಥಿಕ ಸಹಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ವಯಾರ್ಜಿತ ಆಸ್ತಿಗಳನ್ನು ಎತ್ತಿ ಹಾಕಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

O.S. NO. 16/2018

PW - 2 .

Dated 16-06-2026.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.